

**ತ್ಯಾಜ್ಯದ ಒಡಲಿಂದ ಹಸಿರ ತರುವಳು ತಾಯಿ...**

ಇದು ಈಶಾನ್ಯ ಭಾರತದ ಗುವಾಹಟಿಯ ಬೋರಾಗಾವ್ ಎಂಬಲ್ಲಿನ ತ್ಯಾಜ್ಯಗುಡ್ಡೆಗಳ ಚಿತ್ರ. ಮನುಷ್ಯನ ದುರಾಸೆಯ, ಮನಸ್ಸಿನ ಕೊಳಕಿನ ಪ್ರತಿಬಿಂಬದಂತಿರುವ ಈ ತ್ಯಾಜ್ಯರಾಶಿಯ ಮೇಲೆ ಸಾಲುಗಟ್ಟಿ ಕೂತಿರುವ ಹಕ್ಕಿಗಳ ಕೊಕ್ಕು ಆಕಾಶವನ್ನೇ ಕುಕ್ಕುತ್ತಿರುವ ಹಾಗಿವೆ. ಇತ್ತ ಜಾನುವಾರಗಳ ಮೇವಿಗೆ ಎಲ್ಲಿಂದಲೋ ಒಂದಿಷ್ಟು ಹಸಿ ಹುಲ್ಲನ್ನು ಕಡಿದು ತರುತ್ತಿರುವ ತಾಯಿಗೆ ನೆತ್ತಿ ಮೇಲಿನ ಹಸಿರೇ ನಾಳೆಯ ಕುರಿತು ಭರವಸೆ ಹುಟ್ಟಿಸಿರುವಂತಿದೆ. ಅವಳ ಮುಖದ ಮೇಲಿರುವ ಭಾವ ಎಂಥದು? ವಿಷಾದವಾ? ನೋವಾ? ನಿರ್ಲಿಪ್ತತೆಯಾ? ಆಧುನಿಕತೆಯ ವಿಕೃತಿ ಮತ್ತು ಸರಳ ಬದುಕಿನ ಜೀವಂತಿಕೆ ಎರಡೂ ಒಂದಕ್ಕೊಂದು ಮುಖಾಮುಖಿಯಾದ ಗಳಿಗೆಯನ್ನು ಎಎಫ್‌ಪಿ ಸಂಸ್ಥೆಯ ಛಾಯಾಗ್ರಾಹಕ ಬಿಜು ಬೊರೊ ಸೆರೆಹಿಡಿದಿದ್ದಾರೆ.